ಕರ್ನಾಟಕ ವಿಧಾನಸಭೆ

ಶನಿವಾರ 4ನೇ ಆಗಸ್ಟ್ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಎಂ.ಪಿ.ವೆಂಕಟಪ್ಪ ಅವರು) ಪೀಠದಲ್ಲಿ ಉಪಸ್ಥಿತರಿದ್ದರು.

1. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ತೀರ್ಥಹಳ್ಳಿಯಲ್ಲಿನ ನ್ಯಾಯಾಲಯ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಅಲ್ಲಿನ ಶಾಸಕರಿಗೆ ಆಹ್ವಾನ ನೀಡದೇ ಇರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮೊನ್ನೆ ಸದನದಲ್ಲಿ ತೀರ್ಥಹಳ್ಳಿ ನ್ಯಾಯಾಲಯ ಕಟ್ಟಡದ ಉದ್ಘಾಟನೆಯ ಸಂಬಂಧದಲ್ಲಿ ಅಲ್ಲಿಯ ಶಾಸಕರಾದಂತಹ ಸನ್ಮಾನ್ಯ ಅರಗ ಜ್ಞಾನೇಂದ್ರರವರಿಗೆ ಆ ಒಂದು ಕಾರ್ಯಕ್ರಮಕ್ಕೆ ಆಹ್ವಾನ ಇಲ್ಲದಿರುವ ಬಗ್ಗೆ ಮತ್ತು ಶಾಸಕರಿಗೆ ನ್ಯಾಯಾಂಗವು ಒಂದು ರೀತಿಯಿಂದ ಗೌರವ ಕೊಡದೇ ಇರುವಂತಹ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಅದಕ್ಕೆ ತಾವು ಒಂದು ಒಳ್ಳೆಯ ರೀತಿಯ ಸ್ಪಂದನೆ ಕೊಟ್ಟು ಮಾನ್ಯ ಮುಖ್ಯ ನ್ಯಾಯಾಧೀಶರನ್ನು ತಾವು ಮತ್ತು ಮಾನ್ಯ ಕಾನೂನು ಸಚಿವರು ಭೇಟಿಯಾಗಿ ಈ ಸದನದಲ್ಲಿ ಆದಂತಹ ಚರ್ಚೆ, ಶಾಸಕರಿಗೆ ಆದಂತಹ ಅಪಮಾನ ಮತ್ತು ಶಾಸಕರ ಹಕ್ಕು ಬಾಧ್ಯತೆಗಳ ಬಗ್ಗೆ ಅವರೊಡನೆ ಚರ್ಚೆ ಮಾಡಿದ್ದೀರಿ. ತಾವು ಅವರನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯ ನ್ಯಾಯಾಧೀಶರು ಇದರ ಬಗ್ಗೆ ಒಳ್ಳೆಯ ರೀತಿಯ ಪ್ರತಿಕ್ರಿಯೆ ನೀಡಿ ನಾನು ಇದರ ಬಗ್ಗೆ ಓಪನ್ ಮೈಂಡ್ ಇಟ್ಟುಕೊಂಡಿದ್ದೇನೆ, ಶಾಸಕರಿಗೆ ಮತ್ತು ಶಾಸಕಾಂಗಕ್ಕೆ ಯಾವುದೇ ರೀತಿಯ ಅಪಮಾನ ಮಾಡುವ ರೀತಿಯಲ್ಲಿ ನಮ್ಮ ಮೈಂಡಿಲ್ಲ ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತೀರ್ಥಹಳ್ಳಿಯ ನ್ಯಾಯಾಲಯ ಕಟ್ಟಡ ಉದ್ಘಾಟನೆ ಸಮಾರಂಭದ ಪ್ರಸ್ತಾಪ ಕೇವಲ ಸಾಂಕೇತಿಕವಾಗಿತ್ತು. ಈ ರೀತಿಯಾದಂತಹ ಘಟನೆಗಳು ಪುನರಾವರ್ತನೆಯಾಗುತ್ತವೆ ಎನ್ನುವಂತಹ ಭಾವನೆಗಳು ನಮಗೆ ಇತ್ತು. ಮಾನ್ಯ ಮುಖ್ಯ ನ್ಯಾಯಾಧೀಶರು 4ನೇ ತಾರೀಖು ಕಾರ್ಯಕ್ರಮ ನಡೆಯುವುದಕ್ಕಿಂತ ಮುಂಚಿತವಾಗಿ ಮಾನ್ಯ ಅರಗ ಜ್ಞಾನೇಂದ್ರರವರೊಂದಿಗೆ ಮಾತನಾಡಿ ಅವರಿಗೆ ಸೂಕ್ತವಾದಂತಹ ಗೌರವ ಮತ್ತು ಸ್ಥಾನಮಾನ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಈ ಒಂದು ನಿಮಿಷದವರೆಗೂ ಮಾನ್ಯ ಶಾಸಕರಾದ ಅರಗ ಜ್ಞಾನೇಂದ್ರರವರಿಗೆ ಆಹ್ವಾನ ಕೊಡುವ ಬಗ್ಗೆ ಅವರಿಂದ ಯಾವುದೇ ರೀತಿಯ ಸೂಕ್ತ ಪ್ರತಿಕ್ರಿಯೆ ಬಂದಿಲ್ಲ ಹಾಗೂ ಸೌಜನ್ಯಪೂರಕವಾದ ಆಹ್ವಾನ ಅವರಿಗೆ ಇವತ್ತಿನವರೆಗೂ ಕೂಡ ಬಂದಿಲ್ಲ. ತೀರ್ಥಹಳ್ಳಿಯ ಜನ ಪ್ರತಿನಿಧಿಗೆ

ನ್ಯಾಯಾಂಗ ಇಲಾಖೆಯಿಂದ ಆಗಿರುವ ಅಪಮಾನವನ್ನು ಪ್ರತಿಭಟಿಸಿ ಇವತ್ತು ಅಲ್ಲಿ ಬಂದ್ ಆಚರಣೆ ಮಾಡುತ್ತಿದ್ದಾರೆ. ಈ ರೀತಿಯ ಸಂಘರ್ಷ ನಡೆಯುವಂಥಾದ್ದು ಆಗಬಾರದಾಗಿತ್ತು. ಇದನ್ನು ತಪ್ಪಿಸಲಿಕ್ಕೆ ತಾವು ಮತ್ತು ಮಾನ್ಯ ಕಾನೂನು ಸಚಿವರು ಪ್ರಯತ್ನ ಮಾಡಿದ್ದೀರಿ. ಇದಕ್ಕಾಗಿ ತಮಗೆ ಅಭಿನಂದನೆಗಳು. ಆದರೆ ಅದಕ್ಕೆ ನ್ಯಾಯಾಂಗ ಸರಿಯಾದ ರೀತಿಯಲ್ಲಿ ಸೂಕ್ತ ಪ್ರತಿಕ್ರಿಯೆಯನ್ನು ಕೊಡಲಿಲ್ಲ. ಸೌಜನ್ಯಪೂರಕವಾದ ಆಹ್ವಾನ ಕೂಡ ಅವರಿಂದ ಬರಲಿಲ್ಲ. ಇದರಿಂದಾಗಿ ಈ ಸಂಘರ್ಷ ಇನ್ನೂ ಮುಂದುವರೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಸದರಿ ಕಾರ್ಯಕ್ರಮಕ್ಕೆ ತಾವು ಹೋಗುವುದಿಲ್ಲ ಎಂದು ಪ್ರಾಮಿಸ್ ಮಾಡಿದ್ದರು. ಅದರಂತೆ ಅವರು ಕಾರ್ಯಕ್ರಮಕ್ಕೆ ಹಾಜರಾಗದೇ ಇಂದು ಸದನದಲ್ಲಿದ್ದಾರೆ. ಮಾನ್ಯ ಡಿ.ಬಿ.ಚಂದ್ರೇಗೌಡರವರು ಇಂದಿನಂತೆ ನಿನ್ನೆ ಕೂಡ ಸದನಕ್ಕೆ ಬಂದಿರಲಿಲ್ಲ. ನಾನು ನಿನ್ನೆ ಅವರ ಜೊತೆ ಈ ವಿಚಾದರಲ್ಲಿ ಡಿಸ್ಕಷನ್ ಮಾಡಬೇಕೆಂದು ಯೋಚಿಸಿದ್ದೆ. ಮಾನ್ಯ ಡಿ.ಬಿ.ಚಂದ್ರೇಗೌಡರು ತೀರ್ಥಹಳ್ಳಿಯ ಕಾರ್ಯಕ್ರಮಕ್ಕೆ ಹೋಗಿದ್ದಾರೋ ಏನೋ ಗೊತ್ತಾಗಲಿಲ್ಲ. ಅವರು ಬೆಂಗಳೂರಿನಲ್ಲಿಯೇ ಇದ್ದರೆ ಸಂತೋಷ. ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಕಾನೂನು ಸಚಿವರು ಪ್ರಯತ್ನ ಮಾಡಿದ್ದಾಗ್ಯೂ ಈ ರೀತಿಯಾಗಿ ಆ ಕಡೆಯಿಂದ ಸರಿಯಾದಂತಹ ರೆಸ್ಪಾನ್ಸ್ ಸಿಗದಿರುವಂತಹ ಸಂದರ್ಭದಲ್ಲಿ, ಇದು ಸದನಕ್ಕೆ ಮತ್ತು ಶಾಸಕಾಂಗ ವ್ಯವಸ್ಥೆಗೆ ಮಾಡಿರುವಂತಹ ಅಪಮಾನ ಎಂದು ನಾನು ಹೇಳುತ್ತಿದ್ದೇನೆ. ಇದರ ಹೊಣೆಯನ್ನು ಸರ್ಕಾರ ಹೊರಬೇಕಾಗುತ್ತದೆ. ಸರಿಯಾದ ರೀತಿಯಿಂದ ನ್ಯಾಯಾಂಗಕ್ಕೆ ಹೇಳುವಂಥಾದ್ದು, ಅವರು ಅದನ್ನು ಕೇಳುವಂತೆ ಮಾಡಬೇಕಾಗಿತ್ತು. ಆದರೆ ಇಲ್ಲಿ ಅದು ಆಗಿಲ್ಲ. ಇದೊಂದು ಅಪಮಾನವೇ ಸರಿ. ಮಾನ್ಯ ಚಂದ್ರೇಗೌಡರು ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಇದನ್ನು ಹೀಗೆಯೇ ಬಿಟ್ಟರೆ ಇದು ದೊಡ್ಡ ಸಂಘರ್ಷಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೇ, ನಾನು ಈ ಸದನದ ಕಾರ್ಯಕಲಾಪಗಳಲ್ಲಿ 10-17 ವರ್ಷಗಳಿಂದ ಭಾಗವಹಿಸುತ್ತಿದ್ದೇನೆ. ತಮ್ಮ ಅಪ್ಪಣೆ ಪಡೆದು ಈ ಬಗ್ಗೆ ಒಬ್ಬ ಶಾಸಕನಾಗಿ ನಾನೂ ನನ್ನ ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ. ನಾನು ಅವತ್ತು ಹೇಳಿದಂತೆ ನಮ್ಮ ರಾಜ್ಯದಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಯಾವತ್ತೂ ಕೂಡ ಸಂಘರ್ಷ ಉಂಟಾಗಿಲ್ಲ. ಅದು ಆಗಬಾರದು ಎನ್ನುವಂಥಾದ್ದು ನಮ್ಮೆಲ್ಲರ ಸದುದ್ದೇಶವಾಗಿದೆ. ಇದು ಆಗದಂತೆ ಮಾಡಲಿಕ್ಕೆ ಅವಕಾಶ ಇರುವಂಥಾದ್ದು ಮಾನ್ಯ ಮುಖ್ಯಮಂತ್ರಿಗಳಿಗೊಬ್ಬರಿಗೆ ಮಾತ್ರ. ನನಗೆ ಗೊತ್ತಿರುವಂತೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿಚಾರದಲ್ಲೂ ಸಹಿತ ಮುಖ್ಯ ಕಾರ್ಯದರ್ಶಿಗಳು, ಲೋಕಾಯುಕ್ತ, ರಾಜ್ಯಪಾಲರು ಮತ್ತು ಮುಖ್ಯ ನ್ಯಾಯಾಧೀಶರ ಜೊತೆಗೆ ಒಂದು ರೀತಿ ಹೊಂದಾಣಿಕೆಯಿಂದ ನಡೆದುಕೊಂಡು ಹೋಗಬೇಕಾಗಿರುವುದು ಅಗತ್ಯವಿದೆ. ಸದನದಲ್ಲಿ ಅನೇಕ ವಿಚಾರಗಳ ಬಗ್ಗೆ ಚರ್ಚೆಯಾಗಿದೆ. 2-3 ಗಂಟೆಗಳ ಕಾಲ ಈ ಸದನದ

ಸದಸ್ಯರು ಅಲ್ಲದೇ ಇರತಕ್ಕಂಥವರ ಬಗ್ಗೆ ಅಪಹೇಳನ ಮಾಡಬೇಕೆಂಬ ದೃಷ್ಟಿಯಿಂದಲೇ ಚರ್ಚೆಗಳಾಗಿರುವುದನ್ನು ನಾವು ನೋಡಿದ್ದೇವೆ. ನಾವು ಅದನ್ನೆಲ್ಲಾ ಬಹಳ ಕಷ್ಟಪಟ್ಟು ಅದರಿಂದಾದ ಹಿಂಸೆಯನ್ನು ಮತ್ತು ಮಾನಸಿಕ ಯಾತನೆಯನ್ನು ತಡೆದುಕೊಂಡಿದ್ದೇವೆ. ಡೆಮಾಕ್ರಸಿಯಲ್ಲಿ ನಂಬರ್ ಬಹಳ ಇಂಪಾರ್ಟೆಂಟ್, ಇಲ್ಲಿ ಕೇವಲ 19 ಜನ ಸದಸ್ಯರು ಇದ್ದೇವೆ, ನಾವು ಏನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂಬ ದೃಷ್ಟಿಯಿಂದ ಅಸಹಾಯಕರಾಗಿ ಇಲ್ಲಿ ಕುಳಿತುಕೊಂಡಿದ್ದೇವೆ. ಈ ವಿಚಾರದ ಬಗ್ಗೆ ಮತ್ತೆ ಇಲ್ಲಿ ಚರ್ಚೆ ಮಾಡಿದರೆ, ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ, ಶಾಸಕರು ತಮಗೆ ಸ್ಟೇಜ್ ಮೇಲೆ ಛೇರ್ ಕೊಡಲಿಲ್ಲ ಎಂಬ ಕಾರಣಕ್ಕಾಗಿ ಹೀಗೆಲ್ಲಾ ಮಾತನಾಡುತ್ತಾರಲ್ಲಾ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಆಫೀಸರ್ಸ್ ಮತ್ತು ಪಬ್ಲಿಕ್ ಇವರೆಲ್ಲಾ ನಮ್ಮನ್ನು ಈ ಹಿನ್ನೆಲೆಯಲ್ಲಿ ಬಹಳ ಕೆಳದೃಷ್ಟಿಯಿಂದ ನೋಡುತ್ತಾರೆ. ನಾನು ತಮ್ಮಲ್ಲಿ ಮತ್ತೆ ಅವತ್ತು ಮನವಿ ಮಾಡಿಕೊಂಡೆ. ತಾವು ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿದ್ದೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ನಿಮ್ಮ ಕಳಕಳಿಯ ಬಗ್ಗೆ ನಾನು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ನೀವು ಇಲ್ಲಿಂದ ಹೋದ ತಕ್ಷಣ 5 ನಿಮಿಷಗಳಲ್ಲೇ ಮುಖ್ಯ ನ್ಯಾಯಾಧೀಶರ ಜೊತೆಗೆ ದೂರವಾಣಿಯಲ್ಲಿ ಇದರ ಬಗ್ಗೆ ಮಾತನಾಡಿದ್ದೀರಿ. ಇದನ್ನು ಅವಾಯ್ಡ್ ಮಾಡುವ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು ಈ ದಿಸೆಯಲ್ಲಿ ಏನು ಪ್ರಯತ್ನ ಮಾಡಿದ್ದಾರೆ ಎಂಬುದು ಈ ಸದನಕ್ಕೆ ಗೊತ್ತಾಗಬೇಕು. ಏಕೆಂದರೆ ಇದು ಬಹಳ ಪ್ರಾಮುಖ್ಯವಾದಂತಹ ವಿಚಾರವಾಗಿದೆ. ಇದು ಮೊದಲನೇ ಸಾರಿ ಈ ರೀತಿ ಆಗಿದ್ದರೆ ನಾನು ಸುಮ್ಮನಿರುತ್ತಿದ್ದೆ. ಇದು ಆಡಳಿತ ಪಕ್ಷದ ಶಾಸಕರುಗಳಿಗೂ ಆಗಿದೆ, ಮಂತ್ರಿಗಳಿಗೂ ಸಹಾ ಆಗಿದೆ. ಆದರೆ ಅವರು ಅದನ್ನು ಹೇಳಿಕೊಳ್ಳುವಂತಿಲ್ಲ. ಈ ವಿಚಾರ ಸಹ ನನಗೆ ಗೊತ್ತಿದೆ. ಇಂತಹ ವಿಚಾರಗಳಲ್ಲಿ ಹಿರಿಯ ಸದಸ್ಯರಾದಂತಹ ಮಾನ್ಯ ಕೆ.ಹೆಚ್.ರಂಗನಾಥ್‌ರವರು ನಮಗೆ ಸ್ವಲ್ಪ ಗೈಡ್ ಮಾಡಬೇಕಾಗುತ್ತದೆ. ಈ ವಿಚಾರ ಶಾಸಕಾಂಗ ಮತ್ತು ನ್ಯಾಯಾಂಗದ ನಡುವಿನ ಸಂಘರ್ಷಕ್ಕೆ ಕಾರಣವಾಗಲಿದೆ. ನನಗೆ ಗೊತ್ತಿರುವ ಹಾಗೆ ಈಗಾಗಲೇ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಮಾನ್ಯ ಅಧ್ಯಕ್ಷರು ಈ ವಿಚಾರದ ಬಗ್ಗೆ ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ, ಈ ರೀತಿಯಾಗಿ ಒಬ್ಬ ಎಂ.ಎಲ್.ಎ.ಗೆ ಅವಮಾನ ಆಗುತ್ತಿದೆ ಎಂಬುದನ್ನು ಅವರ ಗಮನಕ್ಕೆ ತಂದಿದ್ದಾರೆ. ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ನಾನು ಇದನ್ನು ಕನ್ಸಿಡರೇಷನ್ ಮಾಡುತ್ತೇನೆ ಎಂದು ಮಾನ್ಯ ಮುಖ್ಯ ನ್ಯಾಯಾಧೀಶರು ಹೇಳಿದ್ದಾರೆ ಎಂಬುದನ್ನೂ ಸಹ ನಾನು ಕೇಳಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ವಸ್ತುಸ್ಥಿತಿ ಏನೆಂಬುದನ್ನು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರು ತಮ್ಮ ಕೈಲಾದಮಟ್ಟಿಗೆ ಎಂ.ಎಲ್.ಎ.ಗಳ ಮಾನ, ಮರ್ಯಾದೆಯನ್ನು ರಕ್ಷಣೆ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡಿದ್ದಾರೆ ಎಂಬುದು ನಮಗೆ ಗೊತ್ತಾಗಬೇಕಲ್ಲವೇ? ಸರ್ಕಾರ ಇದರ ಬಗ್ಗೆ ಯಾವ ನಿಲುವನ್ನು ತಳೆದಿದೆ ಎಂಬುದು ನಮಗೆ ಖಚಿತವಾಗಿ ಗೊತ್ತಾಗಬೇಕು. ಸರ್ಕಾರ ಇದಕ್ಕೆ ಅವಕಾಶ ಕೊಟ್ಟದೆಯೇ? ಇದು ನಮಗೆ ಗೊತ್ತಾಗದೇ ಹೋದರೆ ಬಹಳ ಕಷ್ಟವಾಗುತ್ತದೆ. ಸರ್ಕಾರದ ನಿಲುವು ಏನು

ಎನ್ನತಕ್ಕಂಥಾದ್ದು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ದೃಷ್ಟಿಯಲ್ಲಿ ಏನು ಪ್ರಯತ್ನ ಮಾಡಿದ್ದಾರೆ ಎಂಬುದು ನಮಗೆ ಗೊತ್ತಾಗಬೇಕು. ಇದರ ಬಗ್ಗೆ ಬಹಳಷ್ಟು ಚರ್ಚೆಗೆ ಅವಕಾಶ ಮಾಡಿಕೊಡದ ರೀತಿಯಲ್ಲಿ, ಇದನ್ನು ಎಲ್ಲೋ ಒಂದು ಕಡೆ ನಿಲ್ಲಿಸಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಹಿಂದೆ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರೇ ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ ಇದರ ಬಗ್ಗೆ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಈಗ ಅವರು ಸದನದಲ್ಲಿ ಇಲ್ಲ. ಅವರು ಬಂದ ಮೇಲೆ ಇದರ ಬಗ್ಗೆ ತೆಗೆದುಕೊಳ್ಳೋಣ.

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದಾಗ ಅದರ ಬಗ್ಗೆ ಕ್ರಮ ಕೈಗೊಂಡು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಂದು ಹೇಳಿಕೆ ಕೊಟ್ಟಿದ್ದರು. ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ದಿಸೆಯಲ್ಲಿ ಸಮಸ್ಯೆ ಪರಿಹಾರಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವಂತಹ ಮಾತನ್ನೂ ಸಹ ಅವರು ಹೇಳಿದ್ದರು. ಆದರೆ ವಾಟ್ ಆ್ಯಸ್ ಟ್ರಾನ್ಸ್‌ಪೈರ್ಡ್ ಎನ್ನುವುದನ್ನು ಅವರು ಅವತ್ತು ಹೇಳಲಿಲ್ಲ. ಅದನ್ನು ಹೇಳತಕ್ಕದ್ದು ಒಳ್ಳೆಯದಾಗಲಾರದು ಎಂದು ಭಾವಿಸಿ ಬಹಳಮಟ್ಟಿಗೆ ಅವರು ಅದನ್ನು ಪ್ರಸ್ತಾಪ ಮಾಡಲಿಲ್ಲ. ಮಾನ್ಯ ಸ್ಪೀಕರ್ ಮತ್ತು ಮಾನ್ಯ ಮುಖ್ಯಮಂತ್ರಿಗಳು ಭೇಟಿಯಾಗಿದ್ದರು. ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಅವತ್ತು ಹೇಳಿದ್ದಾರೆ. ಜಡ್ಜಸ್ ಬೋರ್ಡ್ ಎಂಬುದು ಏನಿದೆಯೋ ಅಲ್ಲಿ ಒಟ್ಟಾರೆಯಾಗಿ ಒಂದು ತೀರ್ಮಾನವೊಂದನ್ನು ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಮಾತ್ರ ಮಾನ್ಯ ಸಚಿವರು ಅಂದು ಸದನದಲ್ಲಿ ಹೇಳಿದರು. ಮತ್ತೆ ಅದನ್ನು ಅವರು ಪುನರ್‌ಪರಿಶೀಲನೆ ಮಾಡುತ್ತಾರೆ ಎಂದೂ ಸಹ ಹೇಳಿದ್ದರು. ನಮ್ಮ ಜಿಲ್ಲೆಯ ಹೊಸದುರ್ಗದಲ್ಲಿ ಕೋರ್ಟ್ ಬಿಲ್ಡಿಂಗ್ ಓಪನ್ ಮಾಡುವ ಸಮಾರಂಭಕ್ಕೆ ಬರುವಂತೆ ಅಲ್ಲಿಯ ಬಾರ್ ಅಸೋಸಿಯೇಷನ್‌ನವರು ನನ್ನನ್ನು ಆಹ್ವಾನಿಸಲು ಬಂದಿದ್ದರು. ನಾನು ಅವರಿಗೆ, ನೀವೆಲ್ಲಾ ಪತ್ರಿಕೆಗಳಲ್ಲಿ ಓದಿರಬಹುದು ಈ ರೀತಿಯ ಪರಿಸ್ಥಿತಿಯಲ್ಲಿ ನಾನು ಬರುವುದಿಲ್ಲ ಎಂದು ಹೇಳಿದೆ.

ಅಧ್ಯಕ್ಷರು: ಮಾನ್ಯ ಸಿಂಧ್ಯರವರೇ, ಇದರ ಬಗ್ಗೆ ನಾನು ಮತ್ತು ಮಾನ್ಯ ಚಂದ್ರೇಗೌಡರು ಮೊನ್ನೆ ಹೈಕೋರ್ಟ್ ಚೀಫ್ ಜಸ್ಟೀಸ್‌ರವರ ಜೊತೆಗೆ ಮಾತನಾಡಿದ್ದೇವೆ. ಅವರು ಕೆಲವು ವಿಷಯಗಳಲ್ಲಿ 'we will reconsider' ಎಂದು ಹೇಳಿದ್ದಾರೆ. ಮಾನ್ಯ ಚಂದ್ರೇಗೌಡರು ಸದನಕ್ಕೆ ಬರಬೇಕು. ನಂತರ ನಾನು ಮತ್ತು ಅವರು ಕುಳಿತುಕೊಂಡು, ಅಥವಾ ನೀವು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಇದರ ಬಗ್ಗೆ ಚರ್ಚಿಸಿ ಅಂತಿಮವಾಗಿ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳೋಣ. ಇದನ್ನು ಏನಾದರೂ ಮಾಡಿ ಅಂತ್ಯಗೊಳಿಸಬೇಕಾಗುತ್ತದೆ. ಏಕೆಂದರೆ ಲೆಜಿಸ್ಲೇಚರ್‌ಗೂ ಹಾಗೂ ಜ್ಯುಡಿಷಿಯರಿಗೂ

ಘರ್ಷಣೆಯಾಗಬಾರದು. ಇದೇ ರೀತಿ ಒಂದು ಸಲ ಆಗಿತ್ತು, ಅದು ನನಗೆ ಜ್ಞಾಪಕ ಇದೆ. 27 ವರ್ಷಗಳ ಹಿಂದೆ ನಾನು ಲೆಜಿಸ್ಲೇಟಿವ್ ಕೌನ್ಸಿಲ್ ಚೇರ್‌ಮನ್ ಆಗಿದ್ದಾಗ, ಅತ್ತಕಡೆ ಚೀಫ್ ಜಸ್ಟೀಸ್ ಪ್ರೆಸ್ ಕಾನ್‌ಫರೆನ್ಸ್ ಮಾಡಿದರೆ, ಇತ್ತಕಡೆಯಿಂದ ನಾನು ಚೇರ್‌ಮನ್ ಆಗಿ ಪ್ರೆಸ್ ಕಾನ್‌ಫರೆನ್ಸ್ ಮಾಡಿ, ಅದು 2-3 ದಿವಸ ಹಾಗೆ ನಡೆಯಿತು. ಆಮೇಲೆ ಅವರು ತಣ್ಣಗೆ ಆದರು, ನಾವು ತಣ್ಣಗೆ ಆದೆವು. ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರ ಜುರಿಸ್‌ಡಿಕ್ಷನ್ ಅವರಿಗೆ ಇದೆ. ನಮ್ಮ ಜ್ಯುರಿಸ್‌ಡಿಕ್ಷನ್ ನಮಗೆ ಇದೆ. ನಾವು ನಾವು ಪರಸ್ಪರ ಅರಿತುಕೊಂಡು ಅಣ್ಣತಮ್ಮಂದಿರಂತೆ ನಡೆದುಕೊಳ್ಳಬೇಕು. ನೋಡೋಣ, ಮಾನ್ಯ ಚಂದ್ರೇಗೌಡರು ಬರುತ್ತಾರೆ. At this stage, I can't say anything until I talk to the Parliamentary Affairs Ministers.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಇವತ್ತು ನಾನೊಂದು ಪ್ರಶ್ನೆಯನ್ನು ಕೇಳುವುದಿತ್ತು. ತಾವು ಈಗ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಅದನ್ನು ಆಮೇಲೆ ತೆಗೆದುಕೊಳ್ಳೋಣ. ಶೂನ್ಯವೇಳೆಯಲ್ಲಿ ತೆಗೆದುಕೊಳ್ಳಬೇಕಾದಂತಹ ವಿಷಯಗಳು ಬಹಳಷ್ಟು ಇವೆ. ಮಾನ್ಯ ವಿರೋಧಪಕ್ಷದ ನಾಯಕರು ಅವಕಾಶ ಕೇಳಿದರು ಎಂದು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಿನ್ನೆ ಕೂಡ ಅದೇ ರೀತಿಯ ಒಂದು ವಿಚಾರ ನಡೆದಿದೆ. ಅದಕ್ಕೋಸ್ಕರ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬೇಕೆಂದು ಕೇಳುತ್ತಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಅಧ್ಯಕ್ಷರೆ, ತಾವು ನ್ಯಾಯಾಂಗ ಮತ್ತು ಶಾಸಕಾಂಗ ಇವೆರಡರ ಮಧ್ಯೆ ಘರ್ಷಣೆಯಾಗುತ್ತದೆ ಎಂದು ಹೇಳಿದಿರಿ. ಆದರೆ ಒಂದು ಸುತ್ತೋಲೆಯನ್ನು ತಾವೇ ಹೊರಡಿಸಿದಿರಿ, ಅದೇನೆಂದರೆ, ಆಯಾಯ ವಿಧಾನಸಭಾ ಕ್ಷೇತ್ರದಲ್ಲಿ ಏನಾದರೂ ಕಾರ್ಯಕ್ರಮಗಳನ್ನು ನಡೆಸಬೇಕಿದ್ದರೆ.....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಮಾನ್ಯ ನೀಲಕಂಠಪ್ಪನವರೆ, ನಿಮಗೆ ಇದೇರೀತಿ ಅನ್ಯಾಯವಾಗಿದ್ದರೆ ನೀವೂ ಸಹ ಮಾತನಾಡುತ್ತಿದ್ದರಿ. ಸುಮ್ಮನೆ ಏಕೆ ಮಧ್ಯದಲ್ಲಿ ಮಾತನಾಡುತ್ತಿದ್ದೀರಿ? ಮಾನ್ಯ ಅಧ್ಯಕ್ಷರು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ನೀಲಕಂಠಪ್ಪನವರೆ, ತಾವು ಕುಳಿತುಕೊಳ್ಳಿ, ಒಂದು ಕಾರ್ಯಕ್ರಮಕ್ಕೆ ಶಾಸಕರನ್ನು ಆಹ್ವಾನಿಸದೆ ಇರುವುದರ ಬಗ್ಗೆ ಮಾನ್ಯ ಸದಸ್ಯರಾದ ಶಿವಾಜಿನಗರ ಕ್ಷೇತ್ರವನ್ನು

ಪ್ರತಿನಿಧಿಸಿರುವ ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಕೇಳುತ್ತಿದ್ದಾರೆ. ಈ ವಿಚಾರದ ಬಗ್ಗೆ ವಿಷಯ ಪ್ರಸ್ತಾಪ ಮಾಡಿದ್ದಾರೆಯೇ ಹೊರತು ಇನ್ನು ಬೇರೆ ಏನೂ ಇಲ್ಲ. ಶೂನ್ಯವೇಳೆಯಲ್ಲಿ ತೆಗೆದುಕೊಳ್ಳಬೇಕಾದಂತಹ ವಿಷಯಗಳು ಬೇಕಾದಷ್ಟು ಇದೆ. ಮಾನ್ಯ ವಿರೋಧಪಕ್ಷದ ನಾಯಕರು ವಿಷಯ ಮಾತನಾಡಿದರು. ಅವರಿಗೆ ಅವಕಾಶ ಕೊಟ್ಟಿ, ಹಾಗೆ ಇವರೂ ಕೂಡ ಮಾತನಾಡುತ್ತಿದ್ದಾರೆ. ಇನ್ನು ಬೇರೆ ಏನೂ ಇಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅಧ್ಯಕ್ಷರೆ, ಒಂದು ಬಾರಿ ಮಾನ್ಯ ಕಂದಾಯ ಮಂತ್ರಿಗಳು ಒಂದು ಕಾರ್ಯಕ್ರಮವನ್ನು ನನ್ನ ಕ್ಷೇತ್ರದಲ್ಲಿ ಮಾಡಿದರು. ಆ ಕಾರ್ಯಕ್ರಮಕ್ಕೆ ನನ್ನನ್ನು ಆಮಂತ್ರಣ ಮಾಡಿರಲಿಲ್ಲ. ಇನ್ನೊಂದು ಬಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದಂತಹವರು ವಿಧಾನಸೌಧದ ಪಕ್ಕದಲ್ಲಿ ಸುಭಾಷ್ ಚಂದ್ರಭೋಸ್ ಪುತ್ಥಳಿಯನ್ನು ಅನಾವರಣ ಮಾಡಿದರು. ಆಗಲೂ ಕೂಡ ಆ ಕಾರ್ಯಕ್ರಮಕ್ಕೆ ನಮ್ಮನ್ನು ಕರೆಯಲಿಲ್ಲ. ನಿನ್ನೆ ಕೂಡ ಯುವಜನ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ''ಏಕಲವ್ಯ ಪ್ರಶಸ್ತಿ ಪ್ರಧಾನ ಮಾಡಿದಂತಹ ಸಂದರ್ಭದಲ್ಲಿಯೂ ಕೂಡ ನಮ್ಮ ಕ್ಷೇತ್ರದ ಕಡೆಯಿಂದ ನಮ್ಮನ್ನು ಕರೆದಿಲ್ಲ. ಇದು ಒಬ್ಬರಿಗೆ ಒಂದು ರೀತಿಯ ನ್ಯಾಯ, ಇನ್ನೊಬ್ಬರಿಗೆ ಇನ್ನೊಂದು ರೀತಿಯಲ್ಲಿ ನ್ಯಾಯ ಮಾಡುವುದಾದರೆ ನಮ್ಮ ಕ್ಷೇತ್ರದ ಜನರೆಲ್ಲಾ, ತಮ್ಮನ್ನು ಏಕೆ ಕರೆದಿಲ್ಲ? ವಿಧಾನಸಭೆಯಲ್ಲಿ ತಾವು ಸರಿಯಾಗಿ ಮಾತನಾಡುತ್ತೀರಾ, ಇಲ್ಲವೇ ಎಂದು ಕೇಳುತ್ತಾರೆ. ಆದುದರಿಂದ ತಾವು ಆ ಆರ್ಡರನ್ನು ವಾಪಸ್ಸು ಆದರೂ ತೆಗೆದುಕೊಳ್ಳಿ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಶಾಸಕರನ್ನು ಆಹ್ವಾನಿಸುವುದರ ಸುತ್ತೋಲೆ ಬಗ್ಗೆ ಕಠಿಣವಾಗಿ ನಡೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುತ್ತೇನೆ. ಬರೆದರೆ ನಾನು ಅವರಿಗೆ ಬರೆಯಬೇಕು, ಇಲ್ಲದೇ ಇದ್ದರೆ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ಗೆ ಬರೆಯುತ್ತೇನೆ. ಇನ್ನು ಮುಂದೆ ಸುತ್ತೋಲೆಗಳಲ್ಲಿ ಏನೇನಿದೆ ಅದನ್ನು ಸರಿಯಾಗಿ ಪಾಲಿಸಬೇಕೆಂದು ನಾನು ಅವರಿಗೆ ಹೇಳುತ್ತೇನೆ. ಈ ಬಗ್ಗೆ ನಾನು ಸರ್ಕಾರಕ್ಕೆ ಪತ್ರವನ್ನು ಬರೆಯುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ನಾನು ಕಳೆದ ಅಧಿವೇಶನದ ಸಭೆಯಲ್ಲಿ ಈ ವಿಚಾರ ಹೇಳಿದ್ದೆ. ಅದರನಂತರ ಮತ್ತೆ ಇದು ಪುನರಾವರ್ತನೆಯಾಗಿದೆ. ತಾವು ಅಧಿಕಾರಿಗಳಿಗೆ ಹೇಳಿದ್ದೀರಿ. ಈಗ ನನ್ನ ಗಮನಸೆಳೆಯುವ ಸೂಚನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನಿನ್ನೆ ಕೊಡುತ್ತೇನೆ ಎಂದು ಹೇಳಿದ್ದರು. ಆದರೆ ನಿನ್ನೆ ಸಮಯ ಆಗಲಿಲ್ಲ. ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟು, ಇನ್ನು ಮುಂದಿನ ದಿನಗಳಲ್ಲಿ ಈ ರೀತಿ ನಡೆಯದೇ ಇರುವ ಹಾಗೆ ಆಗಬೇಕು. ಏಕೆಂದರೆ ಇಲ್ಲಿ ನ್ಯಾಯಾಂಗ ಹಾಗೂ ಶಾಸಕಾಂಗದ ನಡುವೆ ಘರ್ಷಣೆ ಆದಾಗ ನಮಗೆ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದರ ಬಗ್ಗೆ ತಾವು

ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇದೇ ವಿಷಯ ಪುನರಾವರ್ತನೆಯಾದರೆ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ನಮಗೆ ಮುಜುಗರವಾಗುತ್ತದೆ. ನಾವು ಇಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ನಮ್ಮ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಅಧ್ಯಕ್ಷರು: ಮಾನ್ಯ ಹೆಗಡೆಯವರೆ, ಇತ್ತೀಚಿನ ನಿಮ್ಮ ಎಲ್ಲರ ಉದಾಹರಣೆಗಳನ್ನು ತೋರಿಸಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಾಳೆಯೇ ಪತ್ರ ಬರೆಯುತ್ತೇನೆ. ಈ ರೀತಿ ಏನಾಗುತ್ತಿದೆ, ಅದನ್ನು ಸರಿಯಾಗಿ ಫಾಲೋ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಎಂದು ಹೇಳುತ್ತೇನೆ.